SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rtn. Stephanie A. Urchick
RI President 2024-25

| Rtn. CA Dev Anand | Rtn. K. Sooryanarayana Udpa | Rtn. N.G. Usha | Rtn. M. Madhavachar |
|---|---|---|---|
| District Governor 2024-25 | President, Mob: 99009 66114 | Secretary, Mob : 81975 92278 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –25 ದಿನಾಂಕ : 01–01–2025


## ದಿನಾಂಕ: 01.01.2025 ರ ವಾರದ ಸಭೆಯ ವರದಿ

**ಎಲ್ಲರಿಗೂ ನೂತನ 2025 ರ ವರ್ಷದ ಹಾರ್ಧಿಕ ಶುಭಾಶಯಗಳು**

ದಿನಾಂಕ: 01.01.2025 ರಂದು ನಮ್ಮ ವಾರದ ಸಭೆಗೆ ರೊ.ಪಿಡಿಜಿ. ಜಿ.ಎನ್. ಪ್ರಕಾಶ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ರೋಟರಿ ಚತುರ್ವಿಧ ಪರೀಕ್ಷೆ ನಮ್ಮ ಜೀವನಕ್ಕೆ ನೀಡುವ ಸಂದೇಶ ಎಂಬ ವಿಚಾರವಾಗಿ ಮಾತನಾಡಿದರು. ವೇದಿಕೆಯಲ್ಲಿ ರೊ.ಪಿಡಿಜಿ. ಜಿ.ಎನ್. ಪ್ರಕಾಶ್, ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಉಪಸ್ಥಿತರಿದ್ದರು.






ಇತ್ತೀಚೆಗೆ ನಿಧನರಾದ ನಮ್ಮ ದೇಶದ ಮಾಜಿ ಪ್ರಧಾನಿ ಶ್ರೀ ಮನಮೋಹನ್ ಸಿಂಗ್‌ರವರ ಆತ್ಮಕ್ಕೆ ಗೌರವ ಹಾಗೂ ಶಾಂತಿಯನ್ನು ಸೂಚಿಸಲು ಒಂದು ನಿಮಿಷದ ಮೌನವಾಚರಿಸಲಾಯಿತು.

ರೊ.ಗಾಯತ್ರಿ ಸುಮತೀಂದ್ರರವರು "ಕಣ್ಣು ನೂರು ಸಾಲದು ಅನ್ನಪೂರ್ಣೆಯ ನೋಡಲು ಸಾವಿರ ಸಾಲ್ಗಳು ಸಾಲದು ಈಶ್ವರಿ ಇವಳನು ಹೊಗಳಲು" ಎಂಬ ಗೀತೆಯೊಂದಿಗೆ ಪ್ರಾರ್ಥನೆ ಮಾಡಿದರು. ರೊ. ವಿ. ಶ್ರೀನಿವಾಸ್‌ರವರಿಂದ ಸ್ವಾಗತವಾಯಿತು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪ್ರಕಟಣೆಗಳನ್ನು ನೀಡಿದರು. ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣರವರು ಮಾತನಾಡಿ, ಈ ತಿಂಗಳು ಉಡುಪಿಯಲ್ಲಿ ನಡೆಯಲಿರುವ ರೋಟರಿ ಜಿಲ್ಲಾ ಸಮ್ಮೇಳನಕ್ಕೆ ಬರುವವರು ತಿಳಿಸಬೇಕಾಗಿ ಕೋರಿದರು. ರೊ.ಟಿ.ಕೆ.ಎಂ. ಭಟ್‌ರವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ಇದೇ ಸಂದರ್ಭದಲ್ಲಿ ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರು ಹಾಗೂ ಮಾಜಿ ಸಹಾಯಕ ಗವರ್ನರ್ ಆದ ರೊ.ಎಸ್. ದತ್ತಾತ್ರಿಯವರು ನಗರದ ಕಾಸ್ಮೋ ಕ್ಲಬ್‌ನ ಚುನಾವಣೆಯಲ್ಲಿ ಅತ್ಯಂತ ಹೆಚ್ಚಿನ ಮತಗಳಿಸಿ ಮೊದಲನೇ ಸ್ಥಾನವನ್ನು ಪಡೆದಿರುವುದಕ್ಕೆ ವೇದಿಕೆಗೆ ಆಹ್ವಾನಿಸಿ ಅಭಿನಂದಿಸಲಾಯಿತು.

ನಂತರ ಮಾತನಾಡಿದ ರೊ.ಪಿಡಿಜಿ. ಜಿ.ಎನ್. ಪ್ರಕಾಶ್‌ರವರು ನಮ್ಮ ರೋಟರಿಯು ಹೊಂದಿರುವ ಧ್ಯೇಯವಾದ ಹಾಗೂ ಸಾರ್ವಕಾಲಿಕವಾದ ಸಂದೇಶವಾದ Four way Test ಚತುರ್ವಿಧ ಪರೀಕ್ಷೆ ನಮಗೆ ಎಲ್ಲಾ ಕಾಲಕ್ಕೂ ಎಲ್ಲಾ ಸಂದರ್ಭದಲ್ಲೂ ಅನ್ವಯವಾಗುವಂಥಹುದು. Is it the Truth ? It is fair to all concerned 3. Will it build Good will and Better Friendship.Will it will be beneficial to all concerned. ಇದರಲ್ಲಿ ಮೊದಲನೆಯದಾದ Is it the Truth ಇಲ್ಲವಾದಲ್ಲಿ ಉಳಿದವೆಲ್ಲವೂ ಗೌಣವಾಗುತ್ತದೆ. ಮತ್ತುಳಿದವುಗಳಿಗೆ ಅರ್ಥವೇ ಇರುವುದಿಲ್ಲ. ಈ ಚತುರ್ವಿಧ ಪರೀಕ್ಷೆಯಲ್ಲಿ ತಪ್ಪನ್ನು ಹುಡುಕಲಾಗದು. ಇದು ನಮಗೆ ಒಂದು ತರಹೆಯ ಕನ್ನಡಿ ಇದ್ದ ಹಾಗೆ. ನಮ್ಮ ತಪ್ಪನ್ನು ತೋರಿಸುವುಂಥಹದ್ದಾಗಿದೆ ಎಂದರು.

ಈ ಹಿಂದೆ ಹೇಳಿದಂತೆ, ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್‌ನ ಬ್ರೂಯಾತ್ ಸತ್ಯಮಪ್ರಿಯಂ ಎಂಬಂತೆ ಜೀವನಕ್ಕೆ ಸಂಬಂಧಪಟ್ಟಂತೆ ಹೇಗೆ ಅಳವಡಿಸಿಕೊಳ್ಳಬೇಕು ಎಂಬುದನ್ನು ನಾವು ಅರಿಯಬೇಕು. ಶಾಲಾ ಮಕ್ಕಳಿಗೆ ಪ್ರಬಂಧ ಸ್ಪರ್ಧೆಗಳನ್ನು ನಡೆಸಲು ಮಾತ್ರ ಇದು ಆಗಬಾರದು. ವಿದೇಶಗಳಲ್ಲಿ ಸಭೆಯ ಪ್ರಾರಂಭಕ್ಕೆ ಮುನ್ನ ಫೋರ್ ವೇ ಟೆಸ್ಟ್‌ನ್ನು ಓದಲಾಗುವುದು ಎಂದರು. ಮುಂದುವರೆದ ಅವರು ಕೆಲವೊಂದು ಅಂಶಗಳನ್ನು ಈ ಕೆಳಕಂಡಂತೆ ಮಂಡಿಸಿದರು.

2ನೇ ಪುಟಕ್ಕೆ


## ಈ ವಾರದ ಸಭೆ

**ದಿನಾಂಕ : 08-01-2025 ಬುಧವಾರ ಸಂಜೆ 6:45**

**Chief Guest: Rtn. H.S. Mohan**
**Topic: P.M. Surya Ghar Yojana Solar Power**
**Classification Talk**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ










Rotary is a very unique platform, which talks about Vocation, Excellence in Vocation, Ethics in Vacation and Service the same insistence and all of us should be proud of this. The Four Way Test refers to better friendships, not more friendships. Better friendships are built on five attributes. Respect, Trust, reciprocity, shared experience and mutual enjoyment of each other company.

ಕ್ರಿಸ್ತಪೂರ್ವದಲ್ಲಿ ಸಾಕ್ರಟೀಸ್ ನಂತಹ ಜ್ಞಾನಿಗಳು ನಮ್ಮ ಬದುಕಿನ ಬಗ್ಗೆ ಜ್ಞಾನದ ಬಗ್ಗೆ ತಿಳುವಳಿಕೆಯ ಬಗ್ಗೆ ಹೇಳಿದ್ದಾರೆ ಹರ್ಬಲ್ ಟೇಲರ್‌ಎನ್ನುವ ಉದ್ಯಮಿ ನಷ್ಟವಾಗುತ್ತಿದ್ದ ಅವನ ಉದ್ಯಮವನ್ನು ಈ ಚತುರ್ವಿಧ ಪರೀಕ್ಷೆಯನ್ನು ಅಳವಡಿಸಿ ಲಾಭದ ಹಳಿಗೆ ತಂದಿದ್ದನ್ನು ಉಲ್ಲೇಖಿಸಿದರು.

ಈ Four way Test ನ್ನು ಡಾಕ್ಟರುಗಳು ಅನುಸರಿಸುತ್ತಾರೆ. ಏಕೆಂದರೆ ಅವರುಗಳ ವೃತ್ತಿಯೇ ಅಂಥಹುದಾಗಿದೆ. ಸತ್ಯವನ್ನು ಮರೆಮಾಚಿದರೆ ಅಹಿತದ ಅನುಭವ ಆಗುತ್ತದೆ. ಉತ್ತಮವಾದ ಕೆಲಸವನ್ನು ಮಾಡುವಾಗ ಕೆಲವೊಮ್ಮೆ ನೀತಿ ನಿಯಮವನ್ನು ಮುರಿಯ ಬೇಕಾಗುತ್ತದೆಯಾದರೂ ಇದು ಜನಹಿತಕಾರಿ. ಜನೋಪಕಾರಿ ಯಾಗಿರುತ್ತದೆ ಎಂದರು. ಎಲ್ಲರೂ ಜೀವನದಲ್ಲಿ ಏನಾದರೊಂದು ಸಾಧನೆ ಮಾಡಬೇಕೆಂದಿರುತ್ತಾರೆ. ವೈಭವದ ಜೀವನವನ್ನು ನಡೆಸುವಾಗ ಈ ಚತುರ್ವಿಧ ಪರೀಕ್ಷೆಗಳನ್ನು ಜೀವನಕ್ಕೆ ಅಳವಡಿಸುವಾಗ ಹಸಿದಿರುವ ಜನರನ್ನು ನಾವು ನೋಡಬೇಕಾಗುತ್ತದೆ.

ನಾವು ನಿಜ ಜೀವನವನ್ನು ನೋಡಬೇಕು. ನಮಗಾಗಿ ನಮ್ಮ ಹಿತಕ್ಕಾಗಿ ಕೆಲಸ ಮಾಡುವವರನ್ನು ಗೌರವದಿಂದ ಕಾಣಬೇಕು. ಪ್ರತಿಯೊಬ್ಬರ ಪ್ರತೀ ವೃತ್ತಿಯನ್ನು ಗೌರವದಿಂದ ನೋಡಬೇಕು. ಎಲ್ಲರನ್ನು ಒಂದೇ ತರಹಕಾಣಬೇಕು. ಉಪದೇಶಕ್ಕಿಂತ ಅನುಸರಿಸುವುದು ಒಳ್ಳೆಯದು. ಕೆಲವೊಮ್ಮೆ ಅಪ್ರಸ್ತುತವೆನಿಸಿದರೂ, ನಮಗಿಷ್ಟವಿಲ್ಲದಿದ್ದರೂ ಸುಮ್ಮನಿರಬೇಕಾಗುತ್ತದೆ ಎಂದರು.

ದೇಶ ವಿದೇಶಗಳಲ್ಲಿ ಯುದ್ಧಗಳು ಸಂಭವಿಸಿದರೂ, ರೋಟರಿಯಂಥಹ ಸಂಸ್ಥೆಗಳಿಗೆ ಯಾವುದೇ ಧಕ್ಕೆಯಾಗುವುದಿಲ್ಲ. ಇಂಥಹ ಸನ್ನಿವೇಶಗಳು ನಮಗೆ ಬೇಕು. ಇಲ್ಲಿ ಸ್ನೇಹ ಸಂಬಂಧಗಳು ಮತ್ತು ಶಾಂತಿಯಿಂದ ಬಾಳುವುದನ್ನು ಮತ್ತು ನೀತಿಯಿಂದ ಬದುಕುವುದನ್ನು ಅನುಸರಿಸಲಾಗಿದೆ ಎಂದರು. ಸಣ್ಣ ಮಕ್ಕಳಿಗೆ ಈ Four way Test ಬಗ್ಗೆ ತಿಳಿ ಹೇಳಿ ಅನುಸರಿಸುವಂತೆ ಮಾಡಬೇಕು.

Four way Test ವಾಕ್ಯಗಳನ್ನು ನಮ್ಮ ರೋಟರಿಯ ವಾರದ ಬುಲೆಟಿನ್‌ನಲ್ಲಿ ಮುದ್ರಿಸಲಾಗುತ್ತದೆ. ಎಲ್ಲ ಕಡೆಗೂ ಫಲಕಗಳನ್ನು ಹಾಕಲಾಗುತ್ತದೆ. ಅದರಲ್ಲಿನ ಸಾಲುಗಳನ್ನು ಸಮರ್ಪಕವಾಗಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಮ್ಮಿಂದ ತಪ್ಪಾದಾಗ ಸಂಬಂಧಪಟ್ಟವರಿಗೆ ಕ್ಷಮೆ ಕೇಳಬೇಕು. ಅದರಲ್ಲಿ ತಪ್ಪೇನು ಇಲ್ಲ ಎಂದರು.

ರೋಟರಿಯ ಸಭೆಗಳಿಗೆ ನಾವೊಬ್ಬರು ಹೋಗದಿದ್ದಲ್ಲಿ ಏನಾಗುವುದಿಲ್ಲ ಎಂದು ತಿಳಿಯಬಾರದು. ನಾವು ಏಕೆ ಸೇರುತ್ತಿದ್ದೇವೆ ಎಂಬುದನ್ನು ಅರಿಯಬೇಕು. ರೊ. ಪಿಡಿಜಿ. ಡಾ.ಆರ್.ಡಿ. ಪ್ರಭು, ರೊ.ಪಿಡಿಜಿ. ಡಾ.ಪಿ.ನಾರಾಯಣ ಮುಂತಾದವರು ನನ್ನ ಮಾರ್ಗದರ್ಶಕರು. ಇವರೆಲ್ಲರುಗಳಿಂದ ನಿರ್ಮಾಣವಾದ ನಮ್ಮ ರೋಟರಿಯ ಇತಿಹಾಸವನ್ನು ತಿಳಿದುಕೊಂಡು ನಾವು ಮುಂದು ವರೆಯಬೇಕು. ನನಗೆ ರೋಟರಿಯ ಹಾಗೂ ಜೀವನವನ್ನು ಅರ್ಥಮಾಡಿಸಿದ ರೋಟರಿಗೆ ಧನ್ಯವಾದಗಳು ಎಂದರು. ರೋಟರಿ ಒಂದು ಅದ್ಭುತವಾದ ಸಂಸ್ಥೆ. ಅದರ ತತ್ವಾದರ್ಶಗಳು ನಮ್ಮ ಜೀವನಕ್ಕೆ ಅವಶ್ಯ ಎಂದರು. ಈ ಹಿಂದೆ ಅವರವರ ವೃತ್ತಿಯ ಆಧಾರದ ಮೇಲೆ ಸದಸ್ಯತ್ವವನ್ನು ನೀಡಲಾಗುತ್ತಿತ್ತು. ಒಂದೇ ವೃತ್ತಿಯವರು ಇಬ್ಬರಿರಬಾರದು ಎಂಬ ರೋಟರಿಯ ಕಾನೂನಿತ್ತು ಅದನ್ನು ಅತ್ಯಂತ ಶಿಸ್ತಿನಿಂದ ಪಾಲನೆ ಮಾಡಲಾಗುತ್ತಿತ್ತು ಎಂದರು.

ರೊ.ಪಿಡಿಜಿ ಡಾ.ಆರ್.ಡಿ. ಪ್ರಭುರವರು ಮಾತನಾಡಿ, ವಿದೇಶದ ರೋಟರಿಗಳಲ್ಲಿ ಯಾವ ತರಹೆಯ ಸಭೆಗಳಾಗುತ್ತವೆ ಎಂಬುದನ್ನು ವಿವರಿಸಿದರು. ನಮ್ಮ Four way Test ನಲ್ಲಿರುವಂತೆ ಹಿಂದಿನಿಂದಲೂ ನಮ್ಮಲ್ಲಿ ಸತ್ಯಂ ವದ, ಧರ್ಮಂಚರ ಎಂಬುದಾಗಿ ಇದೆ ಇದು ನಮ್ಮ ಸನಾತನ ಧರ್ಮ. ಹಿಂದಿನಿಂದಲೂ ಬಂದದ್ದು. ಹೊಸದೇನು ಅಲ್ಲವಾದರೂ ಅನುಸರಿಸುವುದು ಮುಖ್ಯ ಎನ್ನುತ್ತಾ ಹೇಗೆ ಲಂಚದ ಹಾವಳಿಗಳು ಕೆಲಸ ಮಾಡುತ್ತವೆ ಎಂಬುದನ್ನೂ ವಿವರಿಸಿದರು.

ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಇಂದಿನ ವಿಷಯದ ಬಗ್ಗೆ ಮಾತನಾಡಿದ ರೊ.ಪಿಡಿಜಿ. ಜಿ.ಎನ್. ಪ್ರಕಾಶ್‌ರವರಿಗೆ ಕೃತಜ್ಞತೆ ವ್ಯಕ್ತಪಡಿಸಿದರು.

ಕೊನೆಯಲ್ಲಿ ರೊ.ಎನ್.ಜಿ. ಉಷಾರವರು ರೋಟರಿಯ ಈ Four way Test ಮನೋಚಿಕಿತ್ಸಕರ ತರಹ ಕೆಲಸಕ್ಕೆ ಒದಗುತ್ತದೆ ಎಂಬುದನ್ನು ವಿವರಿಸಿದರು. ಜೊತೆಗೆ ವಂದನಾರ್ಪಣೆ ಮಾಡಿದರು. ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು, ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು, ರೊ.ಪಿಡಿಜಿ. ಡಾ. ಆರ್.ಡಿ. ಪ್ರಭು, ಮಾಜಿ ಅಧ್ಯಕ್ಷರಾದ ರೊ. ವೀರಣ್ಣ ಎ. ಹುಗ್ಗಿ ಮತ್ತು ರೊ.ಶ್ರೀಧರ ಕಾಮತ್‌ರವರೆಲ್ಲರೂ ಸೇರಿ ಮುಖ್ಯ ಅತಿಥಿಗಳಿಗೆ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಗೌರವಾರ್ಪಣೆ ಮಾಡಿದರು. ರಾಷ್ಟ್ರಗೀತೆಯ ನಂತರ ಸಭೆ ಮುಕ್ತಾಯವಾಯಿತು.




**ರೊ.ಪಿಡಿಜಿ. ಜಿ.ಎನ್. ಪ್ರಕಾಶ್‌ರವರು ನಮ್ಮ ರೋಟರಿಯು ಹೊಂದಿರುವ ಧ್ಯೇಯವಾದ ಹಾಗೂ ಸಾರ್ವಕಾಲಿಕವಾದ ಸಂದೇಶವಾದ Four way Test (ಚತುರ್ವಿಧ ಪರೀಕ್ಷೆ) ನೊಂದಿಗೆ.**




# ಅಧ್ಯಕ್ಷರ ನುಡಿ

**ನಿಮಗೆಲ್ಲರಿಗೂ 2025 ಹೊಸ ವರ್ಷದ ಶುಭಾಶಯಗಳು.**

ಕ್ಲಬ್‌ನ ಅಧ್ಯಕ್ಷತೆ ವಹಿಸಿಕೊಂಡು ಕಳೆದ ಆರು ತಿಂಗಳಿನಿಂದ ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ನೀವೆಲ್ಲರೂ ಸಹಾಯ, ಸಹಕಾರ, ಪ್ರೋತ್ಸಾಹ ನೀಡುತ್ತಿರುವುದಷ್ಟೇ ಅಲ್ಲದೆ ಅನೇಕ ಕಾರ್ಯಕ್ರಮಗಳಿಗೆ ದೇಣಿಗೆ ನೀಡುತ್ತಾ ನಮ್ಮ ರೋಟರಿ ಕ್ಲಬ್ ಅತ್ಯುತ್ತಮ ಕಾರ್ಯಕ್ರಮಗಳನ್ನು ಆಯೋಜಿಸಲು ನೆರವಾಗಿದ್ದೀರಿ. ನಿಮಗೆಲ್ಲರಿಗೂ ನನ್ನ ಹೃದಯ ಪೂರ್ವಕ ಧನ್ಯವಾದಗಳು. ಕೆಲವು ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸುವ ಹಂಬಲ ಇದೆ. ರೋಟರ್‍ಯಾಕ್ಟ್ ಯೂತ್ ವಿಂಗ್ ಪ್ರಾರಂಭಿಸಿದ್ದೇವೆ. ಮುಂದಿನವಾರ ಇಂಟರ್‍ಯಾಕ್ಟ್ ವಲಯ ಸಮ್ಮೇಳನ ಏರ್ಪಡಿಸುತ್ತೇವೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ಹೀಗೆಯೆ ಇರಲಿ ಎಂದು ವಿನಂತಿಸುತ್ತೇವೆ. ರೋಟರಿ ಜಿಲ್ಲಾ ಸಮ್ಮೇಳನ **"ನವೋತ್ಸವ"** ಕಾರ್ಯಕ್ರಮದಲ್ಲಿ ನಾವೆಲ್ಲ ಒಟ್ಟಾಗಿ ಭಾಗವಹಿಸೋಣ.

ಹೊಸ ವರ್ಷವು ಎಲ್ಲರ ಬಾಳಿನಲ್ಲಿ ಹೊಸ ಕನಸುಗಳಿಗೆ ಬೆಳಕಾಗಿ ಹೊಸ ಪ್ರಯತ್ನಗಳಿಗೆ ಶಕ್ತಿಯಾಗಲಿ. 2025 ರ ಈ ವರ್ಷ ನಿಮ್ಮೆಲ್ಲರ ಪ್ರತಿ ಹೆಜ್ಜೆಯೂ ಯಶಸ್ಸು ತರುವಂತಾಗಲಿ. ಜೀವನದಲ್ಲಿ ಸಮೃದ್ಧಿ, ನೆಮ್ಮದಿ, ಆರೋಗ್ಯ ಸಂಕಲ್ಪದೊಂದಿಗೆ ಮುನ್ನಡೆಯೋಣ.

**ಕೆ. ಸೂರ್ಯನಾರಾಯಣ ಉಡುಪ**
**ಅಧ್ಯಕ್ಷರು – 2024–25**







**Rotary Information**
**DISTRICT PROJECTS 2024-25**

1. Awareness of Arogya Swatchatha
2. Awareness of Education & Law
3. Awareness of Green & Water
4. Awareness of Rasthe Sanchara Safety



Happy Birthday Wishes





*Viswendra B. N.*
*08th Jan*



## ಸಂಪಾದಕೀಯ

### ಆಗೋದೆಲ್ಲಾ ಒಳ್ಳೆಯದಕ್ಕೆ...!

ಒಂದೂರಲ್ಲಿ ಒಬ ರಾಜ ಇದ್ದ. ಅವನಿಗೊಬ್ಬ ಬುದ್ಧಿವಂತನಾದ ಮಂತ್ರಿಯಿದ್ದ. ಸದಾ ರಾಜನ ಜೊತೆ ಇರುತ್ತಿದ್ದ ಮಂತ್ರಿ ಯಾವಾಗಲೂ ಏನೇ ಆಗಲಿ 'ಆಗೋದೆಲ್ಲಾ ಒಳ್ಳೆಯದಕ್ಕೆ' ಎನ್ನುತ್ತಿದ್ದ ಒಮ್ಮೆ ರಾಜ ಮಂತ್ರಿಯೊಂದಿಗೆ ಕಾಡಿಗೆ ಬೇಟೆಯಾಡಲು ಹೋಗಿದ್ದ. ಆಗ ಕಾಡುಮೃಗವೊಂದು ರಾಜನ ಮೇಲೆ ದಾಳಿ ಮಾಡಿತು. ಈ ಸಂದರ್ಭದಲ್ಲಿ ರಾಜನ ಕೈಯ ಒಂದು ಬೆರಳು ತುಂಡಾಗಿ ಬಿಟ್ಟಿತು. ಆಗ ಅಲ್ಲಿದ್ದ ಮಂತ್ರಿ ಯಥಾಪ್ರಕಾರ 'ಆಗೋದೆಲ್ಲ ಒಳ್ಳೆಯದಕ್ಕೇ' ಎಂದ. ತನ್ನ ಕೈ ಬೆರಳೂ ಕತ್ತರಿಸಿ ರಕ್ತ ಸುರಿಯುತ್ತಿದ್ದರೂ ಈತ ಆಗೋದೆಲ್ಲ ಒಳ್ಳೇದಕ್ಕೆ ಎಂದು ಹೇಳುತ್ತಿದ್ದಾನಲ್ಲ ಎಂದು ರಾಜನಿಗೆ ವಿಪರೀತ ಸಿಟ್ಟು ಬಂತು. ತಕ್ಷಣ ತನ್ನ ಭಟರನ್ನು ಕರೆಸಿ ಮಂತ್ರಿಯನ್ನು ಸೆರೆಮನೆಗಟ್ಟಿದ. ಇದಾದ ಕೆಲ ದಿನಗಳ ನಂತರ ರಾಜ ಮತ್ತೆ ಬೇಟೆಗೆ ಹೋದ. ಈ ಬಾರಿ ಕಾಡು ಮನುಷ್ಯರು ರಾಜನನ್ನು ನರಬಲಿ ಕೊಡುವುದು ಅವರ ಉದ್ದೇಶವಾಗಿತ್ತು.

ದೇವಿಯ ಮುಂದೆ ಬಲಿಪೀಠದಲ್ಲಿ ರಾಜನನ್ನು ಕುಳ್ಳಿರಿಸಿ ಇನ್ನೇನು ಅವನ ಕತ್ತನ್ನು ಕಡಿಯಬೇಕು ಅಷ್ಟರಲ್ಲಿ ಅವನ ಕೈ ಬೆರಳು ತುಂಡಾಗಿದ್ದು ಅವರ ಕಣ್ಣಿಗೆ ಬಿತ್ತು. ದೇಹದ ಯಾವುದೇ ಭಾಗದಲ್ಲಿ ಸ್ವಲ್ಪ ಊನವಿದ್ದರೂ ಅಂತಹ ವ್ಯಕ್ತಿ ಬಲಿಗೆ ಯೋಗ್ಯನಲ್ಲ ಎಂಬುದು ಅವರ ನಂಬಿಕೆ. ಹಾಗೇನಾದರೂ ಅದಲ್ಲಿ ದೇವಿ ಶಾಪ ಕೊಟ್ಟು ಬಿಡುತ್ತಾಳೆ ಎಂಬ ಭಯ ಅವರದ್ದು. ಹೀಗಾಗಿ ಅವರು ರಾಜನನ್ನು ಬಿಟ್ಟುಬಿಟ್ಟರು. ಬದುಕಿದೆಯಾ ಬಡಜೀವವೇ ಎಂದು ರಾಜ ಅಲ್ಲಿಂದ ಪರಾರಿಯಾದ. ರಾಜಧಾನಿಗೆ ಮರಳಿದವನೇ ತನ್ನ ಭಟರಿಗೆ ತಕ್ಷಣ ಮಂತ್ರಿಯನ್ನು ಸೆರೆಮನೆಯಿಂದ ಬಿಡುಗಡೆ ಮಾಡಿ ಕರೆತರುವಂತೆ ಆಜ್ಞಾಪಿಸಿದ. ಮಂತ್ರಿ ಬಂದೊಡನೆ ಅವನನ್ನು ಬಿಗಿದಪ್ಪಿದ. ರಾಜ 'ನೀನು ಹೇಳಿದ್ದು ನೂರಕ್ಕೆ ನೂರು ಸರಿ. ಆಗೋದೆಲ್ಲ ಒಳ್ಳೆಯದಕ್ಕೆ. ಅಂದು ನನ್ನ ಕೈ ಬೆರಳು ಕತ್ತರಿಸಿ ಹೋಗಿದ್ದರಿಂದಲೇ ನಾನಿಂದು ಜೀವಂತವಾಗಿ ಮರಳಿ ಬಂದಿದ್ದೇನೆ. ಆದರೆ ಒಂದೇ ಬೇಸರ. ನಿನ್ನನ್ನು ವೃಥಾ ಸೆರೆಮನೆಗೆ ತಳ್ಳಿದೆನಲ್ಲ' ಎಂದು ನುಡಿದ.

ಆಗ ಮಂತ್ರಿ ನಗುತ್ತಾ ಹೇಳಿದ 'ಮಹಾರಾಜ ಆಗೋದೆಲ್ಲ ಒಳ್ಳೆಯದಕ್ಕೆ. ನೀವು ನನ್ನನ್ನು ಸೆರೆಮನೆಗೆ ನೂಕದಿದ್ದರೆ ನಾನು ಸಹ ಈ ಬಾರಿಯೂ ನಿಮ್ಮ ಜೊತೆ ಬೇಟೆಗೆ ಬರುತ್ತಿದ್ದೆ. ಸದಾ ನಿಮ್ಮೊಂದಿಗೆ ಇರುತ್ತಿದ್ದ ನನ್ನನ್ನು ಸಹ ಕಾಡು ಮನುಷ್ಯರು ಹೊತ್ತೊಯ್ಯುತ್ತಿದ್ದರು. ಬೆರಳು ಊನವಾಗಿದೆ ಎಂದು ನಿಮ್ಮನ್ನು ಬಿಟ್ಟು ಅವರು ಖಂಡಿತವಾಗಿಯೂ ನನ್ನನ್ನು ಬಲಿಕೊಡುತ್ತಿದ್ದರು' ಎಂದು ನುಡಿದ.

**'ಬರೆದಿರುವುದರ ಎಣಿಕೆಯಲಿ ಬಂದಿಹುದ ಮರೆಯದಿರು_'**
**ಗುರುತಿಸು ಒಳಿತಿರುವುದನು ಕೇಡುಗಳ ನಡುವೆ_**
**ಇರುವ ಭಾಗ್ಯವ ನೆನೆದು ಬಾರನೆಂಬುದ**
**ಬಿಡು ಹರುಷಕಿದೆ ದಾರಿ – ಮಂಕುತಿಮ್ಮ**

ಎಂಬ ಡಿವಿಜಿಯವರ ಕಗ್ಗದ ಸಾಲಿನಂತೆ ಯಾವುದು ನಮಗೆ ಲಭಿಸಿಲ್ಲವೋ ಅದರ ಬಗ್ಗೆ ಕೊರಗುವುದರ ಬದಲು, ನಮ್ಮ ಬಳಿ ಏನಿದೆಯೋ ಅದನ್ನು ನೋಡಿ ಸಂತೋಷ ಪಡುವುದೇ ಒಳಿತು. ಹಾಗೆಯೇ ಕೇಡುಗಳ ನಡುವೆಯೂ ಒಳಿತಿರುತ್ತದೆ. ಸಂಕಷ್ಟಗಳ ನಡುವೆಯೂ ಸಂತಸದ ಬೆಳ್ಳಿ ರೇಖೆ ಇರುತ್ತದೆ. ಕತ್ತಲನಾಚೆಗೆ ಬೆಳಕಿದ್ದೇ ಇರುತ್ತದೆ ಎಂದುಕೊಂಡು ಬದುಕುವುದೇ ಹರುಷದ ನಿಜವಾದ ದಾರಿ.

**• ರೊ. ಎಂ. ಮಾಧವಾಚಾರ್**

**'ನವೋತ್ಸವ'** – ರೋಟರಿ ಜಿಲ್ಲಾ ಸಮ್ಮೇಳನ ಕಾರ್ಯಕ್ರಮವು ಸಾಕಷ್ಟು ಮನರಂಜನೆ, ಉತ್ತಮ ಭಾಷಣಕಾರರು, ಸಾಂಸ್ಕೃತಿಕ ಚಟುವಟಿಕೆಗಳು, ಮೌಲ್ಯಯುತವಾದ ಉಪಯುಕ್ತ ಕಿಟ್, ಅತ್ಯುತ್ತಮ ರುಚಿಕರವಾದ ಆಹಾರಗಳು, ಫೆಲೋಶಿಪ್ ಡಿನ್ನರ್, ತುಂಬಾ ಒಳ್ಳೆಯ ವ್ಯವಸ್ಥೆಗಳು, ಹೀಗೆ ಕಾರ್ಯಕ್ರಮದ ವಾತಾವರಣವು ಎಲ್ಲರಿಗೂ *** ಮ್ಯಾಜಿಕ್ ಕ್ಷಣಗಳನ್ನು ಸೃಷ್ಟಿಸುತ್ತದೆ *** ರೋಟರಿ ಮಿತ್ರರು ದಯವಿಟ್ಟು ತಮ್ಮ ಕುಟುಂಬದ ಸದಸ್ಯರೊಂದಿಗೆ ಭಾಗವಹಿಸಲು ಯೋಜಿಸಿ.




### ಚಿಂತನ

**ಜೀವನದಲ್ಲಿ ಯಶಸ್ಸಿಗಿಂತಲೂ ಸಂತೃಪ್ತಿ ಮುಖ್ಯ**
**ಏಕೆಂದರೆ ಯಶಸ್ಸನ್ನು ಬೇರೆಯವರು ಅಳೆಯುತ್ತಾರೆ.**
**ಆದರೆ ಸಂತೃಪ್ತಿ ಅಳೆಯುವುದು**
**ನಮ್ಮದೇ ಮನಸ್ಸು ಮತ್ತು ಹೃದಯ !**

**– ರೊ. ಕೆ. ಸೂರ್ಯನಾರಾಯಣ ಉಡುಪ**

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495